ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ- ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿರುವ ಅಗ್ನಿಶಾಮಕ ದಳವನ್ನು 1990 ನೇ ಸಾಲಿನಲ್ಲಿ ಸರ್ಕಾರದವರು ವಹಿಸಿಕೊಂಡು ನಂತರ ಹುಬ್ಬಳ್ಳಿಯಲ್ಲಿರುವ ಅಗ್ನಿಶಾಮಕ ದಳವನ್ನು ಅಮರಗೋಳ ಎಪಿಎಂಸಿ ಮಾರುಕಟ್ಟೆಗೆ ಸ್ಥಳಾಂತರಿಸಿರುತ್ತಾರೆ. ಕಾರಣ ಇದರಿಂದ ಹುಬ್ಬಳ್ಳಿಯಲ್ಲಿ ಅಥವಾ ಧಾರವಾಡದಲ್ಲಿ ಅಗ್ನಿಗೆ ಆಹುತಿಯಾದದ್ದನ್ನು ತುರ್ತಾಗಿ ನಿಯಂತ್ರಿಸಲು ಅಸಾಧ್ಯ ಉಂಟಾಗಿರುವುದು ಕಂಡು ಬರುತ್ತದೆ. ಏಕೆಂದರೆ, ಹುಬ್ಬಳ್ಳಿಯಿಂದ 12 ಕಿ. ಮೀ. ಆಗುತ್ತದೆ. ಧಾರವಾಡದಿಂದಲೂ ಸಹ 12 ಕಿ.ಮೀ. ಅಂತರವಿರುತ್ತದೆ. ಈ ಎರಡೂ ಶಹರಗಳ ಮಧ್ಯದಲ್ಲಿ ಅಗ್ನಿಶಾಮಕ ದಳವನ್ನು ಸ್ಥಳಾಂತರಿಸುವುದರಿಂದ, ತೊಂದರೆಯನ್ನು ಅನುಭವಿಸುವಂತಹ ಪರಿಸ್ಥಿತಿಯುಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆದಕ್ಕೋಸ್ಕರ ನಾನು ಈ ಮೂಲಕ ತಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹುಬ್ಬಳ್ಳಿ ಶಹರದಲ್ಲಿ ಒಂದು, ಧಾರವಾಡ ಶಹರದಲ್ಲಿ ಒಂದು ಅಗ್ನಿಶಾಮಕ ದಳದ ವಾಹನಗಳನ್ನು ನಿಲ್ಲಿಸುವ ವ್ಯವಸ್ಥೆ ಅತೀ ತುರ್ತಾಗಿ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : (ಗೃಹಸಚಿವರ ಪರವಾಗಿ) 1986ನೇ ಇಸವಿಯಿಂದ ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ನಡುವೆ ಇರುವ ಅಮರಗೋಳ ಎಂಬ ಜಾಗದಲ್ಲಿ ಸುಸಜ್ಜಿತವಾದ ಅಗ್ನಿಶಾಮಕ ಠಾಣೆಯೊಂದನ್ನು ನಡೆಸಲಾಗುತ್ತಿದೆ. ಈ ಸ್ಥಳವು ಹುಬ್ಬಳ್ಳಿಯಿಂದ ಹಾಗೂ ಧಾರವಾಡದಿಂದ 12 ಕಿ.ಮೀ.ಗಳ ಅಂತರದಲ್ಲಿದ್ದು ಎರಡೂ ಕಡೆಯ ಸಮಸ್ಯೆಗಳನ್ನು ನಿಭಾಯಿಸಲು ಅನುಕೂಲವಾಗಿದೆ. ಸಾಧಾರಣವಾಗಿ ಒಂದು ಅಗ್ನಿಶಾಮಕ ಠಾಣೆಯು 40 ಕಿ.ಮಿ.ಗಳ ಅಂತರದವರೆಗೂ ಇರುವ ಸಮಸ್ಯೆಗಳನ್ನು ನಿಭಾಯಿಸುವ ವ್ಯವಸ್ಥೆ ಇದೆ. ಪ್ರಸ್ತುತ ಹುಬ್ಬಳ್ಳಿ ಮತ್ತು ಧಾರವಾಡ ಎರಡೂ 12 ಕಿ.ಮಿ.ಗಳ ಅಂತರದೊಳಗೆ ಇರುವುದರಿಂದ ಯಾವುದೂ ತೊಂದರೆ ಇರುವುದಿಲ್ಲ. ಅಂತಹ ಯಾವುದೇ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ಹುಬ್ಬಳ್ಳಿಯಲ್ಲಿ ಮುಂಬರುವ ವರ್ಷಗಳಲ್ಲಿ ಪ್ರತ್ಯೇಕವಾದ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವುದರ ಬಗ್ಗೆ ಹಣಕಾಸು ಹಾಗೂ ಇತರೆ ಸಂಪನ್ಮೂಲಗಳನ್ನು ಆಧರಿಸಿ ಪರಿಶೀಲಿಸಲಾಗುತ್ತಿದೆ.

ಈಗಲೂ ಕೂಡ ಮುಂಜಾಗ್ರತೆಯ ಕ್ರಮವಾಗಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಗಳು ಒದಗುವ ಸಂದರ್ಭಗಳಲ್ಲಿ ಹುಬ್ಬಳ್ಳಿಯಲ್ಲಿ ಒಂದು ಅಗ್ನಿಶಾಮಕ ವಾಹನವನ್ನು, ಧಾರವಾಡದಲ್ಲಿ ಒಂದು ಅಗ್ನಿಶಾಮಕ ವಾಹನವನ್ನು ನಿಲ್ಲಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

4) ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಒದಗಿಸಿದ ಹಣ ಬಿಡುಗಡೆಯಾಗದಿರುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ 1991-92 ಹಾಗೂ 1992-93ನೇ ಸಾಲಿನಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಹಾಗೂ ಮೂವತ್ತೈದು ಕೋಟಿ ರೂಪಾಯಿಗಳನ್ನು ಅನುಕ್ರಮವಾಗಿ ಆಯವ್ಯಯ ಪಟ್ಟಿಯಲ್ಲಿ ನೀಡಲಾಗಿತ್ತು. ಆದರೆ ಈ ಹಣವು ಇನ್ನೂವರೆಗೂ ಖರ್ಚಾಗಿರುವುದಿಲ್ಲವೆಂದು ದುರ್ದೈವದಿಂದ ಹೇಳಬೇಕಾಗಿದೆ. ಅಲ್ಲದೇ ಈ ಹಣವು

ಇನ್ನೂವರೆಗೂ ಬಿಡುಗಡೆ ಸಹ ಆಗಿರುವುದಿಲ್ಲ. ಆದ ಕಾರಣ, ಕೂಡಲೇ ಮಲೆನಾಡು ಅಭಿವೃದ್ಧಿ ಯೋಜನೆಗೆ ಆಯವ್ಯಯದಲ್ಲಿಟ್ಟ ಹಣವನ್ನು ಬಿಡುಗಡೆ ಮಾಡುವುದಾಗಬೇಕು ಮತ್ತು ಈ ಹಣವನ್ನು ಈ ವರ್ಷದ ಹಣಕಾಸಿನ ವರ್ಷದೊಳಗಾಗಿ ಅಂದರೆ ಮಾರ್ಚ್ 31ರೊಳಗಾಗಿ ಖರ್ಚು ಮಾಡುವಂತೆ ಆದೇಶ ನೀಡುವುದಾಗಬೇಕು. ಮತ್ತು ಈ ಹಣ ಲ್ಯಾಪ್ಸ್ ಆಗದಂತೆ ಕ್ರಮ ಕೈಗೊಳ್ಳುವುದಾಗಬೇಕು. ಈ ವಿಷಯದ ಬಗ್ಗೆ ಸವಿಸ್ತಾರವಾಗಿ ತಿಳಿಸಲು ನಾನು ಮಲೆನಾಡು ಅಭಿವೃದ್ಧಿ ಸಚಿವರ ಹಾಗೂ ಪರಿಸರ ಸಚಿವರ ಗಮನವನ್ನು ತಮ್ಮ ಮುಖಾಂತರ ಸೆಳೆಯುತ್ತೇನೆ...

ಅಸೆಂಬ್ಲಿ ನಡೆದಾಗ ಯಾವ್ಯಾವ ಸಚಿವರು ಹೋಗಬೇಕು ಎಂದರೆ ಅವರು ತಮಗೆ ತಿಳಿಸಿ ಹೋಗಬೇಕೆಂದು ತಮ್ಮನ್ನು ಕೇಳುತ್ತೇನೆ. ಮಲೆನಾಡು ಅಭಿವೃದ್ಧಿ ಯೋಜನೆ ಬಗ್ಗೆ ಸಚಿವರಿಗೆ ಏನೇನೂ ಮಾಹಿತಿ ಇಲ್ಲದೆ ಇದ್ದರೂ ಸಹ ಹೇಳುತ್ತಾರೆಯೇ?

ಛೇರ್ಮನ್ : ಇದು 334ರ ಮೇರೆಯ ವಿಷಯ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ನೀವು ಇದರ ಮೇಲೆ ಮಾತನಾಡಬಾರದು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನನಗೆ ಅವರು ಆನ್ಸರ್ ಕೊಡಬೇಕಾದ್ದು ಇಲ್ಲ.

ಛೇರ್ಮನ್ : 334ರ ಮೇರೆಗೆ ಸರ್ಕಾರದ ಗಮನ ಸೆಳೆಯುತ್ತಿದ್ದೀರಿ. ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಬ್ಲೇಸಿಯಸ್. ಎಂ. ಡಿಸೋಜ : ನಾನು ಮಾನ್ಯ ಸಚಿವರ ಪರವಾಗಿ ಉತ್ತರ ಹೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸರ್ಕಾರದ ಗಮನಕ್ಕೆ ತರುವುದು ಮಾತ್ರ ನಡೆಯುತ್ತಿದೆ. ಆದರೆ, ನಾನು ಹೇಳುವುದು ನೀವು ತಿಳಿದುಕೊಳ್ಳುವುದಿಲ್ಲ. ಇವತ್ತಿನ ದಿವಸ ಸರ್ಕಾರದೊಳಗೆ ಯಾವ ಪ್ರಕಾರ ಕೆಲಸ ಆಗುತ್ತಿದೆ ...

ಛೇರ್ಮನ್ : ನೀವು ಇದರ ಮೇಲೆ ಚರ್ಚೆ ಮಾಡುವ ಹಾಗೆ ಇಲ್ಲ.

(ಗೊಂದಲ)

ಶ್ರೀ ಎಸ್. ಹೆಚ್.ಕೌಜಲಗಿ : ಮಾನ್ಯ ಅಧ್ಯಕ್ಷರೇ, ಅಧಿವೇಶನ ನಡೆಯುವಾಗ ಯಾರಾದರೂ ಸಚಿವರು ಬೇರೆ ಕಡೆ ಹೋಗಬೇಕಾದರೆ ಅವರು ತಮಗೆ ತಿಳಿಸಿ ಹೋಗಬೇಕು. ಮಲೆನಾಡು ಅಭಿವೃದ್ಧಿ ಯೋಜನಾ ಸಚಿವರು ಇಲ್ಲ. You must pull up the concerned Minister.

ಛೇರ್ಮನ್ : ಇದು ನಿಯಮ 334.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನನಗೇನು ಅವರು ಉತ್ತರ ಕೊಡಬೇಕಾಗಿಲ್ಲ.

ಶ್ರೀ ಬ್ಲೇಸಿಯಸ್. ಎಂ. ಡಿಸೋಜ : ನಾನು ಮಲೆನಾಡು ಅಭಿವೃದ್ಧಿ ನಿಗಮದ ಸಚಿವರ ಪರವಾಗಿ ಓದುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಬರೀ ಸರ್ಕಾರದ ಗಮನಕ್ಕೆ ಬಂದರೂ ನಡೆಯುತ್ತದೆ. ಆದರೆ, ನಾನು ಹೇಳುವುದು ತಿಳಿದುಕೊಳ್ಳುವುದಿಲ್ಲ. ಇವತ್ತಿನ ದಿವಸ ಸರ್ಕಾರದಲ್ಲಿ ಯಾವ ಪ್ರಕಾರ ನಡೆಯುತ್ತಿದೆ.

ಭೀಮ್ಮನ್ : ಇದರಲ್ಲಿ ಚರ್ಚೆ ಇಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸಂಬಂಧಪಟ್ಟ ಮಂತ್ರಿಗಳು ಊರಿನಲ್ಲಿ ಇಲ್ಲದಿದ್ದಾಗಲೂ ಸಹಿತ ಅವರು ಬಂದ ಮೇಲೆ ಉತ್ತರವನ್ನು ಕೊಟ್ಟಿದ್ದಾರೆ.

ಭೀಮ್ಮನ್ : ತಮಗೆ ಗೊತ್ತಿದೆ ಇದು ನಿಯಮ 334.

ಶ್ರೀ ಶಿವಾನಂದ ಹೆಚ್.ಕೌಜಲಗಿ : ಅವರು ಓದದಿದ್ದರೂ ಪರವಾಗಿಲ್ಲ. ನಾನು ಸರ್ಕಾರದ ಗಮನಕ್ಕೆ ತಂದೆ.There should be discipline in the House. ಆದರೆ, ಇಷ್ಟೊಂದು ಜನ ಮಂತ್ರಿಗಳು ಇದ್ದರೂ ಸಹ ಸಂಬಂಧಪಟ್ಟ ಮಂತ್ರಿಗಳು ಬಂದು ಉತ್ತರ ಕೊಡದಿದ್ದರೆ ಹೇಗೆ? ಇವತ್ತು 45 ಲಕ್ಷ ರೂಪಾಯಿ ಲ್ಯಾಪ್ಸ್ ಆಗಿದೆ.

ಭೀಮ್ಮನ್ : ನಿಯಮ 334ರಲ್ಲಿ ಮಾತನಾಡಲಿಕ್ಕೆ ಅವಕಾಶವಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಆದರೆ ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ. ಅದರಿಂದ ನಾವು ಪ್ರೊಟೆಸ್ಟ್ ಮಾಡುತ್ತೇವೆ.

ಶ್ರೀ ಬ್ಲೇಸಿಯಸ್.ಎಂ. ಡಿಸೋಜ : ಮಾನ್ಯ ಮಂತ್ರಿಗಳು ಕೌನ್ಸಿನ್‌ನಲ್ಲಿದ್ದಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಅವರು ಕೌನ್ಸಿನ್‌ನಲ್ಲಿ ಇಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಲೆನಾಡು ಅಭಿವೃದ್ಧಿ ಮಂತ್ರಿಗಳ ಪರವಾಗಿ ಕಾರ್ಮಿಕ ಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ, ಕೊಡಲಿ.

ಭೀಮ್ಮನ್ : ಮಲೆನಾಡು ಅಭಿವೃದ್ಧಿ ಮಂತ್ರಿಗಳ ಪರವಾಗಿ ಕಾರ್ಮಿಕ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಉತ್ತರವನ್ನು ಯಾರು ಬೇಕಾದರೂ ಕೊಡಬಹುದು. ಅಂದರೆ ಈ ಹೌಸ್‌ನ ಬೆಲೆ ಏನು ಉಳಿಯುತ್ತದೆ? ಒಬ್ಬ ಆಫೀಸರ್ ಬರುವುದಿಲ್ಲ., ಒಬ್ಬ ಮಂತ್ರಿ ಬರುವುದಿಲ್ಲ ಅಂದರೆ ಹೇಗೆ?

* ಶ್ರೀ ಬ್ಲೇಸಿಯಸ್ ಎಂ. ಡಿಸೋಜ : (ಮಲೆನಾಡು ಅಭಿವೃದ್ಧಿ ಮಂಡಳಿಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಾಗಿ 1991-92ನೇ ಸಾಲಿಗೆ 10.00 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು. ಇದನ್ನು ಪಡೆದುಕೊಂಡು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕಾರ್ಯದರ್ಶಿಗಳ ಪಿ.ಡಿ.ಖಾತೆಯಲ್ಲಿಡಲಾಗಿದೆ. ಇದರಲ್ಲಿ 5.00 ಲಕ್ಷ ರೂ.ಗಳನ್ನು ಸಿಬ್ಬಂದಿಗಾಗಿ ಖರ್ಚು ಮಾಡಲಾಗಿದೆ.

1992-93ನೇ ಸಾಲಿಗೆ 35.00 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಹಣ ಖರ್ಚಾಗಿಲ್ಲವೆಂಬುದು ನಿಜ. ಆದಾಗ್ಯೂ ಈ 35.00 ಕೋಟಿ ರೂ.ಗಳನ್ನು ಶೀಘ್ರ ಪಡೆದುಕೊಂಡು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

5) ಮೂಡಿಗೆರೆ ತಾಲ್ಲೂಕಿನ ಕೆ.ಇ.ಬಿ.ಯಲ್ಲಿ ಲೈನ್‌ಮ್ಯಾನ್ ಹುದ್ದೆಗಳು ಖಾಲಿ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಕೆ.ಇ.ಬಿ. ಇಲಾಖೆಯಲ್ಲಿ ಲೈನ್‌ಮ್ಯಾನ್ ಹುದ್ದೆಗಳು ಖಾಲಿ ಇರುವುದಲ್ಲದೆ, ಬಹಳ ವಯಸ್ಸಾದವರು ಕುಡಿತಕ್ಕೆ ಬಲಿಯಾದವರೇ ಇದ್ದು, ಇವರುಗಳು ಗ್ರಾಮಾತಂರ ಪ್ರದೇಶದಲ್ಲಿನ ಕೆ.ಇ.ಬಿ. ಇಲಾಖೆ ಕೆಲಸಗಳನ್ನು (ಅಳವಡಿಸುವುದು ವೈರ್ ರಿಪೇರಿ ಮಾಡುವುದು) ಸರಿಯಾಗಿ ನಿರ್ವಹಿಸದೇ ಜನರಿಂದ ಬಹಳ ದೂರುಗಳು ಬರುತ್ತಿವೆ. ದಯಮಾಡಿ, ಕೂಡಲೇ ತೊಂದರೆಯನ್ನು ನಿವಾರಿಸಲು ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ. ಎ. ನಿಸಾರ್ ಅಹಮದ್ (ಇಂಧನ ರಾಜ್ಯದ ಸಚಿವರು) : (ಉಪ ಮುಖ್ಯ ಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಸಂಪೂರ್ಣ ಮಲೆನಾಡಿನ ಪ್ರದೇಶವಾಗಿರುತ್ತದೆ. ಸರಿಯಾದ ಸಂಪರ್ಕ ವ್ಯವಸ್ಥೆ ಇಲ್ಲದಿರುವುದರಿಂದ ಲೈನುಗಳ ದುರಸ್ತಿ ಮತ್ತು ನಿರ್ವಹಣೆಯ ಕಾರ್ಯಗಳಲ್ಲಿ ಸ್ವಲ್ಪ ವಿಳಂಬ ಉಂಟಾಗುವುದು ಸಹಜ. ಅಲ್ಲದೇ ಮೂಡಿಗೆರೆಯಲ್ಲಿರುವ ಮಂಡಳಿಯ ಉಪ ವಿಭಾಗದಲ್ಲಿ ಹಾಲಿ ನಾಲ್ಕು ಲೈನ್‌ಮನ್ ಹುದ್ದೆಗಳು ಖಾಲಿ ಇರುವುದರಿಂದ, ನಿರ್ವಹಣೆ ಮತ್ತು ರಿಪೇರಿ ಕೆಲಸಗಳಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಯ ಉಂಟಾಗುತ್ತಿದೆ. ಕರ್ತವ್ಯ ಭ್ರಷ್ಟ ನೌಕರರುಗಳ ವಿರುದ್ಧ ವಿಚಾರಣೆ ನಡೆಸಿ, ಸಿಡಿಸಿಎ ನಿಯಮಗಳ ಪ್ರಕಾರ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಹಾಗೂ ಖಾಲಿ ಇರುವ ಲೈನ್‌ಮನ್‌ಗಳ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು.

6) Direct K.S.R.T.C. Bus from Nippani to Bangalore.

Sri. Subhash S. Joshi (Nippani) : Mr. Speaker Sir, K.S.R.T.C. has started new Super Delux Bus from Chikkodi to Bangalore. But as there is no